ಎಸ್.ಸಿ. ನಂ:10007/2023

ಪ್ರಾಸಾ : 6

**ಈ ದಿನ ದಿನಾಂಕ:** 08-011-2024 **ರಂದು ಪಿ.ಡಬ್ಲೂ:** 6 **ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

1. ಮೃತ ರಾಶಿ ನನಗೆ ಗೊತ್ತಿರುತ್ತಾರೆ. ಆರೋಪಿಯನ್ನು ಇದೇ ಪ್ರಥಮ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಸದರಿ ಆರೋಪಿಯನ್ನು ಈ ಹಿಂದೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅಂದರೆ ಈ ಹಿಂದೆ ನ್ಯಾಯಾಲಯದಲ್ಲಿ ಬಂದಾಗ ನೋಡಿರುತ್ತೇನೆ ಎಂದರೆ ಸರಿಯಲ್ಲ. ಅದರ ಹಿಂದೆಯೂ ಸಹ ಠಾಣೆಯಲ್ಲಿದ್ದಾಗ ನೋಡಿರುತ್ತೇನೆ.
2. ಸದರಿ ಆರೋಪಿಯೇ ರಾಶಿಯನ್ನು ಚುಚ್ಚಿ ರುತ್ತಾನೆ ಎಂಬುದನ್ನು ಆರೋಪಿಯನ್ನು ನೋಡಿ ಗುರುತಿಸಲು ಪೋಲಿಸರು ಆರೋಪಿಯ ಗುರುತು ಪತ್ತೆ ಹಚ್ಚಲು ನನ್ನ ಮುಂದೆ ಪರೇಡ್ ನಡೆಸಿರುತ್ತಾರೆ. ನಾನು ಈ ಹಿಂದೆ ಮತ್ತು ಈ ದಿನ ಪಿರ್ಯಾದುದಾರರೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. ನ್ಯಾಯಾಲಯದಲ್ಲಿ ಈ ರೀತಿ ಹೇಳುವಂತೆ ಹೇಳಿರುತ್ತಾರೆ ಎಂದರೆ ಸರಿ. ಆ ಪ್ರಕಾರವಾಗಿ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ಆರೋಪಿಯ ಹೆಸರು ಮತ್ತು ವಿಳಾಸ ಗೊತ್ತಿರುವುದಿಲ್ಲ ಎಂದರೆ ವಿಳಾಸ ಗೊತ್ತಿರುವುದಿಲ್ಲ ಆದರೆ ಹೆಸರು ರವಿಚಂದ್ರ ಎಂದು ಇರುತ್ತದೆ. ಆರೋಪಿಯ ಹೆಸರು ಮತ್ತು ವಿಳಾಸದ ಬಗ್ಗೆ ಪಿರ್ಯಾದುದಾರರ ಹತ್ತಿರ ಚರ್ಚಿಸಿರುತ್ತೇನೆ ಎಂದರೆ ಸರಿ.
3. ಆರೋಪಿಯು ಆದಿನ ಚಾಕು ಮಾತ್ರ ತಂದಿದ್ದನು ಮತ್ತು ಅದರಿಂದ ಚುಚ್ಚಿ ದ್ದನು ಅದನ್ನು ಮಾತ್ರ ತೆಗೆದುಕೊಂಡು ಹೋಗಿದ್ದನು. ಬೇರೆ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ ಮತ್ತು ಅದನ್ನು ನಾನು ನೋಡಿರುವುದಿಲ್ಲ. ಆರೋಪಿಯು ಆ ದಿನ ಬಿಳಿ ಬಣ್ಣದ ಸ್ಕೂಟಿಯಲ್ಲಿ ಬಂದಿದ್ದನು ಅದರ ನಂಬರ ಗೊತ್ತಿರುವುದಿಲ್ಲ.
4. ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ ಆದರೆ ವಿಚಾರಣೆ ಮಾಡಿದಾಗ ಎಲ್ಲವನ್ನೂ ಹೇಳಿರುತ್ತೇನೆ. ಈ ಘಟನೆಯ ಪೂರ್ವದಲ್ಲಿ ಆರೋಪಿಯೊಂದಿಗೆ ಆದ ಗಲಾಟೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ.
5. ಮೃತ ರಾಶಿ ಮೇಲೆ ನನಗೆ ಮೊಮ್ಮಗಳಂತೆ ಪ್ರೀತಿ ಇತ್ತು ಎಂದರೆ ಸರಿ. ಚುಚ್ಚಿ ದ ಸಮಯದಲ್ಲಿ ನಾನು ದೂರದಲ್ಲಿ ಇದ್ದೆ ಎಂದರೆ ಸರಿ. ಜಮೀನಿನಲ್ಲಿ ಸುತ್ತಮುತ್ತ ಬೇಲಿ ಮರಗಿಡಗಳು, ಬದು ಎಲ್ಲಾ ಇರುತ್ತದೆ ಎಂದರೆ ಸರಿ. ನಾನು ಬರುವಷ್ಟರಲ್ಲಿ ಆರೋಪಿಯು ಚುಚ್ಚಿ ಓಡಿ ಹೋಗುತ್ತಿದ್ದನು ಎಂದರೆ ಗಾಡಿ ತೆಗೆದುಕೊಂಡು ಹೋಗುತ್ತಿದ್ದನು. ಸದರಿ ಆರೋಪಿಯು ಮುಂದೆ ನೋಡಿ ಹೋಗುತ್ತಿದ್ದನು ಎಂದರೆ ಸರಿ. ಬಚಾವ್ ಆಗಬೇಕೆಂದು ಆ ಸ್ಥಳದಿಂದ ಓಡಿ ಹೋಗುತ್ತಿದ್ದನು.

**6.** ನಾನು ರಾಶಿ ಬಿದ್ದಲ್ಲಿಗೆ ಬರುವಷ್ಟರಲ್ಲಿ ಆರೋಪಿ ಮುಂದೆ ಓಡಿ ಹೋಗಿದ್ದನು ಎಂದರೆ ಸರಿ. ಆ ಸಮಯದಲ್ಲಿ ಆರೋಪಿಯ ಮುಖ ನೋಡಲು ಆಗಲಿಲ್ಲ ಎಂದರೆ ಸರಿ. ಪೋಲಿಸರು ಆರೋಪಿಯ ಎತ್ತರ, ಗಾತ್ರ ಮತ್ತು ಅಳತೆಯ ಬಗ್ಗೆ ಏನೂ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ. ಪಿರ್ಯಾದುದರಾರಿಗೆ ಸಹಾಯ ಮಾಡಲು ಮತ್ತು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದು ಆ ರೀತಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಕಾರಣ ಮುಂದೆ ಆ ರೀತಿ ಆಗಬಾರದೆಂದು ಸಾಕ್ಷಿ ನುಡಿಯುತ್ತಿದ್ದೇನೆ.

**7.** ಈದಿನವೂ ಸಹ ಆರೋಪಿಯೇ ಅಥವಾ ಬೇರೆ ವ್ಯಕ್ತಿಯೇ ಎಂಬ ಬಗ್ಗೆ ಸಂಶಯ ಇರುತ್ತದೆ ಎಂದರೆ ಸರಿಯಲ್ಲ. ಅದೇ ವ್ಯಕ್ತಿ ಆಗಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ